ಮಾಡೋದು ಮತ್ತು ಇವುಗಳನ್ನೇ ತನಿಖೆ ಮಾಡೋದು. ಇನ್ನು ಕೊಂಚ ದಿನ ಹೋಗಿದ್ದರೆ, ಈ ಕೇಸ್ ಕೂಡ ದೂಳು ಹಿಡಿಯುತ್ತಿತ್ತೇನೋ. ಆದರೆ ಆ ತೆರೆದ ಕಿಟಕಿಯ ಮುಖಾಂತರ ಎಲ್ಲಾ ಕತೆ ತೆರೆದುಕೊಂಡಿತು."

"ಕತೆ ಚೆನ್ನಾಗಿದೆ ರುದ್ರೇಶ್. ಆದರೆ ನಾನೇ ಕೊಲೆ ಮಾಡಿದೆ ಅಂತಾ ಸಾಬೀತು ಮಾಡಲು ಈ ಸಾಕ್ಷಿಗಳು ಸಾಕಾ? ಕೋರ್ಟಿನಲ್ಲಿ ನನಗೆ ಶಿಕ್ಷೆ ಕೊಡಿಸಲು ನಿಮ್ಮ ಈ ಥಿಯರಿಯಿಂದ ಸಾಧ್ಯವಾ... ಯೋಚಿಸಿ."

ಬಿಜುನ ಧ್ವನಿ ವ್ಯಂಗ್ಯವಾಗಿ ಬದಲಾಯಿತು.

ನಿಧಾನವಾಗಿ ತನ್ನ ಸೀಟಿನಲ್ಲಿ ಕುಳಿತುಕೊಳ್ಳುತ್ತಾ ರುದ್ರೇಶ್, "ಈ ಥಿಯರಿಯನ್ನು ಜೋಡಿಸಲು ನನಗೆ ಬೇಕಾದಷ್ಟು ಕೊಂಡಿಗಳಿವೆ. ನಿಮ್ಮ ಮೇಲೆ ಅನುಮಾನ ಪಡಲು ಬೇಕಾದಷ್ಟು ಕಾರಣಗಳಿವೆ. ನಮ್ಮ ಕೆಲಸ ಅವೆಲ್ಲವನ್ನೂ ಒಗ್ಗೂಡಿಸಿ, ಒಂದು ಕೇಸ್ ತಯಾರಿಸಿ, ನ್ಯಾಯಾಲಯದ ಮುಂದಿಡುವುದು. ಅಲ್ಲಿ ನ್ಯಾಯಾಧೀಶರಿಗೆ ನಮ್ಮ ವಾದ ನಿಜ ಎನಿಸಿದರೆ ಶಿಕ್ಷೆಯಾಗುತ್ತದೆ. ಇಲ್ಲಾಂದರೆ ಬಿಡುಗಡೆ. ಆದರೆ ನಿಮ್ಮ ಆತ್ಮಸಾಕ್ಷಿಯೆಂಬ ನ್ಯಾಯಾಲಯದಲ್ಲಿ ನೀವೇ ಆಪಾದಿತ, ನೀವೇ ಸಾಕ್ಷಿ ಮತ್ತು ನೀವೇ ಜಡ್ಜ್ ಕೂಡಾ. ಅಲ್ಲಿ ತಪ್ಪಿಸಿಕೊಳ್ಳಲು ಆಗದು. ಯಾವುದೋ ಆವೇಶ, ಕೋಪ ಅಥವಾ ಇನ್ನಾವುದೋ ಅವಮಾನ ಇವೆಲ್ಲಾ ತೀರಿಸಿಕೊಳ್ಳಲು ಒಂದು ಅಪರಾಧ ಮಾಡಿದ್ದೀರಿ. ಅದರಿಂದ ತಪ್ಪಿಸಿಕೊಳ್ಳಲು ಆಗದು. ಯಾವಾಗ, ಯಾರಿಗೆ ತಿಳಿಯುತ್ತದೆಯೋ ಎನ್ನುವ ಭಯದಿಂದಲೇ ಇಡೀ ಜೀವನ ಬದುಕಬೇಕು. ಲೂಸಿ ಜೊತೆ ಬಾಳಲು ಆಗಲ್ಲ ಅಂತ ಅವಳಿಂದ ಈ ರೀತಿ ದೂರವಾದರೆ, ಆಮೇಲೆ ಮನಃಶಾಂತಿ ಸಿಗುತ್ತದೆ ಅಂತ ಅಂದುಕೊಂಡಿರಾ? ಆತ್ಮಸಾಕ್ಷಿಯ ಭಾರ ಯಾವತ್ತಿಗೂ ತಡೆಯಲಾಗದು... ಮಿಕ್ಕಿದ್ದು ನಿಮ್ಮ ಇಷ್ಟ".

ರುದ್ರೇಶ್ ಮೌನವಾದ. ತನ್ನ ಮುಂದಿರುವ ಸಾಕ್ಷಿಗಳಿಂದ ಕೇವಲ ಆರೋಪ ಹೊರಿಸಬಹುದಾಗಿತ್ತು, ಆದರೆ ಕೇಸ್ ಗೆಲ್ಲಲು ಆಗುವುದಿಲ್ಲ ಎನ್ನುವ ಕಟುಸತ್ಯದ ಅರಿವಿತ್ತು. ಮನುಷ್ಯನ ಆತ್ಮಸಾಕ್ಷಿಯನ್ನು ಬಡಿದೆಬ್ಬಿಸಿದರೆ ಅದು ಸತ್ಯವನ್ನೇ ಹೇಳುತ್ತದೆ ಎನ್ನುವ ಅರಿವಿನಿಂದ ಒಂದು ಪ್ರಯತ್ನ ಮಾಡಿದ್ದ.

ಕೆಲಕಾಲದ ಮೌನದ ನಂತರ ಬಿಜು ಎದ್ದು ನಿಂತ. ಅವನ ಕಣ್ಣುಗಳಲ್ಲಿ ನೀರು ತುಂಬಿತ್ತು.

"ನೀವು ಹೇಳಿದ್ದೆಲ್ಲಾ ನಿಜ ಸರ್. ನನ್ನ ಪತ್ನಿ ಲೂಸಿಯನ್ನು ನಾನೇ ಕೊಲೆ ಮಾಡಿದೆ ಎಂದು ಒಪ್ಪಿಕೊಳ್ಳುತ್ತೇನೆ." ಒಂದೊಂದೇ ಶಬ್ದ ಬಿಡಿಬಿಡಿಸಿ ನುಡಿದ.

ಎಸಿಪಿ ರುದ್ರೇಶ್ ಸಮಾಧಾನದ ನಿಟ್ಟುಸಿರು ಬಿಟ್ಟ.


**ವಾಸುದೇವ ಮೂರ್ತಿ ಪಿ.**

ಹುಟ್ಟಿದ ಊರು ಶಿವಮೊಗ್ಗ. ಸಿವಿಲ್ ಎಂಜಿನಿಯರ್ ಆಗಿರುವ ಅವರು ಸಂವಹನ ಕಲೆ ಮತ್ತು ಇತರ ವೃತ್ತಿಪರ ಕೌಶಲ್ಯಗಳಿಗೆ ತರಬೇತಿ ಕೊಡುವ ಸಂಸ್ಥೆಯೊಂದನ್ನು ನಡೆಸುತ್ತಿದ್ದಾರೆ. ಮೊದಲಿನಿಂದಲೂ ಪತ್ತೆದಾರಿ ಸಾಹಿತ್ಯದ ಬಗ್ಗೆ ಆಸಕ್ತಿ. ಪತ್ತೆದಾರಿ ಕಾದಂಬರಿಕಾರರಾದ ಎನ್. ನರಸಿಂಹಯ್ಯ, ಟಿ.ಕೆ. ರಾಮರಾವ್ ಅವರ ಕಾದಂಬರಿಗಳಿಂದ ಶುರುವಾದ ಓದುವ ಆಸಕ್ತಿ ಬಳಿಕ ಬರವಣಿಗೆಯತ್ತ ಹೊರಳಿದೆ. ಅವರ ಪತ್ತೆದಾರಿ ಕತೆಗಳ ಸಂಕಲನ 'ದಿ ಪರ್ಫೆಕ್ಟ್ ಮರ್ಡರ್'.